ಶ್ರೀ ಎ. ಲಕ್ಷ್ಮೀಸಾಗರ್.—ಕಾನೂನು ಸಂಸದೀಯ ವ್ಯವಹಾರಗಳು ಮತ್ತು ನಗರಾಭಿವೃದ್ಧಿ ಖಾತೆಯ ಮಂತ್ರಿಗಳು).—ಮಾನ್ಯ ಅಧ್ಯಕ್ಷರೇ,

" 1985ನೇ ಇಸವಿಯ ಕಾನೂನು ನೆರವು ಮಂಡಲಿ ತಿದ್ದುಪಡಿ ವಿಧೇಯಕವನ್ನು ಮಂಡಿಸಲು ತಮ್ಮ ಅನುಮತಿಯನ್ನು ಕೋರುತ್ತೇನೆ. "

ಅಧ್ಯಕ್ಷರು.—ಪ್ರಸ್ತಾವವೇನೆಂದರೆ,

" 1985ನೇ ಇಸವಿಯ ಕಾನೂನು ನೆರವು ಮಂಡಲಿ ತಿದ್ದುಪಡಿ ವಿಧೇಯಕವನ್ನು ಮಂಡಿಸಲು ಅನುಮತಿಯನ್ನು ನೀಡುವುದು. "

ಪ್ರಸ್ತಾವನೆ ಅಂಗೀಕರಿಸಲ್ಪಟ್ಟಿತು ಮತ್ತು ವಿಧೇಯಕದ ಮಂಡನೆಗೆ ಅನುಮತಿಯನ್ನು ನೀಡಲಾಯಿತು.

ಶ್ರೀ ಎ. ಲಕ್ಷ್ಮೀಸಾಗರ್ (ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ನಗರಾಭಿವೃದ್ಧಿ ಖಾತೆಯ ಮಂತ್ರಿಗಳು).—ಮಾನ್ಯ ಅಧ್ಯಕ್ಷರೇ,

" 1985ನೇ ಇಸವಿಯ ಕಾನೂನು ನೆರವು ಮಂಡಲಿ ತಿದ್ದುಪಡಿ ವಿಧೇಯಕವನ್ನು ಮಂಡಿಸುತ್ತೇನೆ. "

*ಅಧ್ಯಕ್ಷರು.—ವಿಧೇಯಕವನ್ನು ಮಂಡಿಸಲಾಯಿತು.

(2) 1985ನೇ ಇಸವಿಯ ಕರ್ನಾಟಕ ಲೇವಾದೇವಿಗಾರರ ತಿದ್ದುಪಡಿ ವಿಧೇಯಕ. ಮಂಡನೆಗೆ ಅನುಮತಿ ಕೋರಿಕೆ.

ಶ್ರೀ ಆರ್. ಎಲ್. ಜಾಲಪ್ಪ (ಸಹಕಾರ ಮಂತ್ರಿಗಳು).—ಮಾನ್ಯ ಅಧ್ಯಕ್ಷರೇ,

" 1985ನೇ ಇಸವಿಯ ಕರ್ನಾಟಕ ಲೇವಾದೇವಿಗಾರರ ತಿದ್ದುಪಡಿ ವಿಧೇಯಕವನ್ನು ಮಂಡಿಸಲು ಅನುಮತಿಯನ್ನು ಕೋರುತ್ತೇನೆ. "

ಸಭಾಧ್ಯಕ್ಷರು.—ಪ್ರಸ್ತಾವ ಏನೆಂದರೆ,

" 1985ನೇ ಇಸವಿಯ ಕರ್ನಾಟಕ ಲೇವಾದೇವಿಗಾರರ ತಿದ್ದುಪಡಿ ವಿಧೇಯಕವನ್ನು ಮಂಡಿಸಲು ಅನುಮತಿಯನ್ನು ನೀಡುವುದು. "

ಪ್ರಸ್ತಾವನೆಯನ್ನು ಅಂಗೀಕರಿಸಲ್ಪಟ್ಟಿತು ಮತ್ತು ವಿಧೇಯಕದ ಮಂಡನೆಗೆ ಅನುಮತಿಯನ್ನು ನೀಡಲಾಯಿತು.

ಶ್ರೀ ಆರ್. ಎಲ್. ಜಾಲಪ್ಪ.— ಮಾನ್ಯ ಅಧ್ಯಕ್ಷರೇ,

" 1985ನೇ ಇಸವಿಯ ಕರ್ನಾಟಕ ಲೇವಾದೇವಿಗಾರರ ತಿದ್ದುಪಡಿ ವಿಧೇಯಕವನ್ನು ಮಂಡಿಸುತ್ತೇನೆ. "

*ಅಧ್ಯಕ್ಷರು.—ವಿಧೇಯಕವನ್ನು ಮಂಡಿಸಲಾಯಿತು.

(3) 1985ನೇ ಇಸವಿಯ ಕರ್ನಾಟಕ ಗಿರಿವಿದಾರರ ವಿಧೇಯಕ. ಮಂಡನೆಗೆ ಅನುಮತಿ ಕೋರಿಕೆ.

ಶ್ರೀ ಆರ್. ಎಲ್. ಜಾಲಪ್ಪ (ಸಹಕಾರ ಮಂತ್ರಿಗಳು).— ಮಾನ್ಯ ಅಧ್ಯಕ್ಷರೇ,

" 1985ನೇ ಇಸವಿಯ ಕರ್ನಾಟಕ ಗಿರಿವಿದಾರರ ವಿಧೇಯಕವನ್ನು ಮಂಡಿಸಲು ಅನುಮತಿಯನ್ನು ಕೋರುತ್ತೇನೆ. "

ಅಧ್ಯಕ್ಷರು.—ಪ್ರಸಾವವೇನೆಂದರೆ,

" 1985ನೇ ಇಸವಿಯ ಕರ್ನಾಟಕ ಗಿರಿವಿದಾರರ ವಿಧೇಯಕವನ್ನು ಮಂಡಿಸಲು ಅನುಮತಿಯನ್ನು ನೀಡುವುದು. "

ಪ್ರಸ್ತಾವನೆ ಅಂಗೀಕರಿಸಲ್ಪಟ್ಟಿತು ಮತ್ತು ವಿಧೇಯಕದ ಮಂಡನೆಗೆ ಅನುಮತಿಯನ್ನು ನೀಡಲಾಯಿತು.

ಶ್ರೀ ಆರ್. ಎಲ್. ಜಾಲಪ್ಪ (ಸಹಕಾರ ಮಂತ್ರಿಗಳು).—ಮಾನ್ಯ ಅಧ್ಯಕ್ಷರೇ,

" 1985ನೇ ಇಸವಿಯ ಕರ್ನಾಟಕ ಗಿರಿವಿದಾರರ ವಿಧೇಯಕವನ್ನು ಮಂಡಿಸುತ್ತೇನೆ. "

*Annexure

*ಅಧ್ಯಕ್ಷರು.—ವಿಧೇಯಕವನ್ನು ಮಂಡಿಸಲಾಯಿತು.

1985-86ರ ಆಯವ್ಯಯದ ಮೇಲಿನ ಸಾಮಾನ್ಯ ಚರ್ಚೆ.

*ಶ್ರೀ ಎಸ್. ಬಂಗಾರಪ್ಪ (ಮಾನ್ಯ ವಿರೋಧಪಕ್ಷದ ನಾಯಕರು).—ಸನ್ಮಾನ್ಯ ಸಭಾಧ್ಯಕ್ಷರೇ, ಮಾನ್ಯ ಮುಖ್ಯಮಂತ್ರಿಗಳು 1985-86ನೇ ಸಾಲಿನ ಆಯವ್ಯಯ ಪತ್ರವನ್ನು ಏನು ಮಂಡಿಸಿದ್ದಾರೆ, ಅದನ್ನು ಕೆಲವು ಕಾರಣಗಳ ಆಧಾರದ ಮೇಲೆ ವಿರೋಧಿಸಿ ಮಾತನಾಡುವುದಕ್ಕೆ ಎದ್ದು ನಿಂತಿದ್ದೇನೆ. ವಿರೋಧ ಮಾಡುವುದಕ್ಕೆ ಕೆಲವು ಪ್ರಮುಖವಾಗಿರತಕ್ಕಂಥ ಅಂಶಗಳು ಕಾರಣವಾಗಿರುತ್ತವೆ ಎನ್ನುವ ಅಭಿಪ್ರಾಯವನ್ನು ಅಂಶವನ್ನು ಮಾನ್ಯ ಸಭಾಧ್ಯಕ್ಷರ ಗಮನಕ್ಕೆ ತರುವುದಕ್ಕೆ ಇಚ್ಛಿಪಡುತ್ತೇನೆ. ಈ ಆಯವ್ಯಯ ಪತ್ರವನ್ನು ಮಂಡಿಸುವಾಗ, ಯಾವುದೇ ಪಕ್ಷದ ಸರಕಾರ ಇರಲಿ, ಕೆಲವು ಪ್ರಮುಖವಾದಂಥ ಅಂಶಗಳನ್ನು ಗಮನದಲ್ಲಿಟ್ಟುಕೊಳ್ಳಬೇಕಾಗುತ್ತದೆ. ಈ ಅಂಶಗಳನ್ನು ಗಮನದಲ್ಲಿಟ್ಟುಕೊಳ್ಳದೆ ಆಯವ್ಯಯ ಪತ್ರವನ್ನು ಸಿದ್ಧಮಾಡಿ ಈ ಸದನದ ಒಪ್ಪಿಗೆಗಾಗಿ ಇಟ್ಟಾಗ, ಜನ ವಿರೋಧವಾದ ದೃಷ್ಟಿಯಿಂದ ಹೋದಾಗ, ನಾವು ಅದನ್ನು ವಿರೋಧ ಮಾಡಬೇಕಾಗುತ್ತದೆ. ಈ ಒಂದು ಆಯವ್ಯಯ ಪತ್ರ ಕೆಲವು ಪ್ರಾಮುಖ್ಯವಾದ, ವಿಶೇಷವಾದ ಗುಣಗಳನ್ನು ಹೊಂದಿರಬೇಕಾಗುತ್ತದೆ. ಬುದು ಆಯವ್ಯಯ ಪತ್ರ ಹಣದುಬ್ಬರಕ್ಕೆ ಎಡೆ ಮಾಡಿಕೊಡಬಾರದು. ಹಣದ ಕೊರತೆ ಇರುವ ಆಯವ್ಯಯ ಪತ್ರವನ್ನು ಒಪ್ಪಿಗೆಗಾಗಿ ಇಟ್ಟಾಗ ಅಥವಾ ಜನತೆಯ ಮುಂದೆ ಇಟ್ಟಾಗ, ಅದು ಹಣದುಬ್ಬರಕ್ಕೆ ಎಡೆಮಾಡಿಕೊಡಬಾರದು. ಎರಡನೆಯದು, ಹಣದುಬ್ಬರಕ್ಕೆ ಎಡೆ ಮಾಡಿಕೊಡುವಂಥ ಆಯವ್ಯಯ ಪತ್ರ ನಮ್ಮ ಮುಂದಿದ್ದಾಗ, ಆ ಹಣದುಬ್ಬರದ ಮೇಲೆ ಉದ್ಭವವಾಗತಕ್ಕಂಥ ಪರಿಣಾಮಗಳು ಇಡೀ ಸಮಾಜದ ಮೇಲೆ, ಸಮಾಜದಲ್ಲಿರತಕ್ಕಂಥ ಎಲ್ಲ ವರ್ಗಗಳ ಮೇಲೆ ತೀವ್ರತರವಾದ ಕೆಟ್ಟ ರೀತಿಯ ಪರಿಣಾಮವನ್ನು ಉಂಟು ಮಾಡುತ್ತದೆ ಎಂಬ ಅಂಶವನ್ನು ನಮ್ಮ ಗಮನದಲ್ಲಿಟ್ಟಿರಬೇಕಾಗುತ್ತದೆ. ಒಂದು ಆಯವ್ಯಯ ಪತ್ರವನ್ನು ಸಿದ್ಧಮಾಡಿದಾಗ, ನಮ್ಮ ರಾಜ್ಯದಲ್ಲಿರತಕ್ಕಂಥ ಡೆವಲಪ್‌ಮೆಂಟಲ್ ಆಕ್ಟಿವಿಟೀಸ್, ಪ್ರಗತಿಪರವಾದ ವಿಚಾರಧಾರೆಗಳು, ಯೋಜನೆಗಳ ಚೌಕಟ್ಟಿನಲ್ಲಿ ಇಳಿದುಬರಬೇಕು. ಈ ಯೋಜನೆಗಳು ಕಾರ್ಯಗತವಾಗಿ ಅದರಿಂದ ಸಿಗತಕ್ಕ ಫಲಗಳು, ಪರಿಣಾಮಗಳು ಜನಹಿತದ ಪರವಾಗಿ ಇರುತ್ತವೆ, ಇರಬೇಕು ಎಂಬ ಅಂಶವನ್ನೂ ನಾವು ಗಮನದಲ್ಲಿ ಇಟ್ಟುಕೊಳ್ಳಬೇಕಾಗುತ್ತದೆ. ಇದರ ಜೊತೆಯಲ್ಲಿ ಅಗತ್ಯವಸ್ತುಗಳ ಬೆಲೆಗಳ ವಿಚಾರ ಇದೆ. ಹಣದುಬ್ಬರಕ್ಕೆ ಎಡೆಮಾಡಿಕೊಡತಕ್ಕಂಥ ಆಯವ್ಯವ ಪತ್ರ ನಮ್ಮ ಮುಂದಿದ್ದಾಗ, ಇಡೀ ಒಂದು ವರ್ಷದವರೆಗಿನ ಪರಿಸ್ಥಿತಿಯ ಅವಲೋಕನೆಯನ್ನು ಈ ಒಂದು ಬಜೆಟ್‌ನಲ್ಲಿ ನಾವು ನೋಡಿದಾಗ, ಆಗತ್ಯವಸ್ತುಗಳ ಬೆಲೆ ಏರಿಕೆ, ಹಣದುಬ್ಬರದಿಂದ ಉದ್ಭವವಾಗತಕ್ಕ ಬೆಲೆ ಏರಿಕೆ ಬಂದಾಗ, ಅದು ಜನರ ಆರ್ಥಿಮಿತಿಯನ್ನು ಜನ ಕೊಳ್ಳತಕ್ಕಂಥ ಶಕ್ತಿಯನ್ನು ಮೀರಿ ಹೋಗುತ್ತದೆ ಎಂಬುದನ್ನು ಗಮನದಲ್ಲಿಡಬೇಕು. ಇದು ಆದಷ್ಟು ಮೀರಿ ಹೋಗಬಾರದು ಎಂಬ ವಿಚಾರವನ್ನು ನಾವು ಗಮನದಲ್ಲಿ ಇಡಬೇಕು. ಎರಡು ವರ್ಗದ ಜನರನ್ನು ನಾವು ಸಮಾಜದಲ್ಲಿ ಕಾಣುತ್ತೇವೆ. ನೌಕರಿಯಲ್ಲಿದ್ದು ಸೇವೆ ಸಲ್ಲಿಸತಕ್ಕವರು ಒಂದು ವರ್ಗ. ಈ ಸೇವೆಯ ವ್ಯಾಪ್ತಿಯನ್ನು ಬಿಟ್ಟಿರತಕ್ಕಂಥವರು ಮತ್ತೊಂದು ವರ್ಗ. ಗ್ರಾಮಾಂತರ ಪ್ರದೇಶದಲ್ಲೇ ಇರಬಹುದು, ಅರ್ಬನ್ ಏರಿಯಾಸ್‌ನಲ್ಲಿ ಇರಬಹುದು. ಕೂಲಿ ಮಾಡತಕ್ಕಂಥವರು, ಸಣ್ಣಪುಟ್ಟ ಅಂಗಡಿ ಇಟ್ಟು ಜೀವನ ಮಾಡುವರು, ತರಕಾರಿ ಮಾರುವವರು, ಖಾಸಗಿ ಕ್ಷೇತ್ರದಲ್ಲಿ ಬೇರೆ ಉದ್ಯೋಗದಲ್ಲಿರುವವರು, ಈ ವರ್ಗಕ್ಕೆ ಸೇರಿದವರು. ನಗರ ಪ್ರದೇಶದಲ್ಲಿ ಹುಟ್ಟಣ ಪ್ರದೇಶದಲ್ಲಿ ನಾವು ಹೆಚ್ಚಾಗಿ ನೌಕರಿ ಮಾಡತಕ್ಕಂಥ ಜನರನ್ನು ಕಾಣುತ್ತೇವೆ. ಬಿಸಿನೆಸ್, ಕೆಲಸ ಇದನ್ನು ಬಿಟ್ಟು ಗ್ರಾಮಾಂತರ ಪ್ರದೇಶದಲ್ಲಿ ನಾವು ನೋಡತಕ್ಕಂಥ ವರ್ಗ, ಕೂಲಿ ಮಾಡತಕ್ಕಂಥ ವರ್ಗ, ಇನ್ನೊಬ್ಬರ ಭೂಮಿಗೆ ಹೋಗಿ ಕೂಲಿಮಾಡಿ ಜೀವನ ಮಾಡಬೇಕು, ಸಾಯಂಕಾಲ ಅದಮೇಲೆ ಆ ದಿನದ ಕೂಲಿಯನ್ನು ಪಡೆದು ಅಂದಿನ ಊಟಕ್ಕಾಗಿ ಅಕ್ಕಿ, ರಾಗಿ, ಜೋಳ, ಮುಂತಾದ ದವಸಧಾನ್ಯಗಳನ್ನು ಕೊಂಡು ಊಟ ಮಾಡತಕ್ಕಂಥ ವರ್ಗವನ್ನು ನಾವು ಕಾಣುತ್ತೇವೆ. ನಾವು ಚಿಕ್ಕವಯಸ್ಸಿನವರಾಗಿದ್ದಾಗ ಇದು ಇರಲಿಲ್ಲ. ಕೂಲಿ ಮಾಡಿಕೊಂಡು ಬಂದಮೇಲೆ ವರ್ಷಕ್ಕೊಂದು ಸಲ ಕೂಲಿ ತೆಗೆದುಕೊಳ್ಳತಕ್ಕ ಪರಿಸ್ಥಿತಿಯನ್ನು ನಾವು ಕಂಡಿದ್ದೇವೆ.

ಜನಸಂಖ್ಯೆಯು ದೊಡ್ಡ ಪ್ರಮಾಣದಲ್ಲಿ ಆಗಿರುವುದೂ ಕಾರಣ ಇರಬಹುದು, ಅಥವಾ ಬೇರೆ ಕಾರಣ ಇರಬಹುದು. ನಿತ್ಯ ದಿನಗೂಲಿ ಮಾಡಿ ಜೀವನ ಮಾಡತಕ್ಕ ಜನ ಲಕ್ಷಾಂತರ ಮಂದಿ ಇದ್ದಾರೆ. ಸಮಾಜಕ್ಕೆ ಲಾಭವಾಗುವಂಥ ಒಂದು ವರ್ಗ ಇದೆ. ಆ ವರ್ಗಕ್ಕೆ ತೀವ್ರವಾದ ಪರಿಣಾಮ ಉಂಟಾಗುತ್ತದೆ. ಹಣದುಬ್ಬರದಿಂದ ಬೆಲೆಗಳು ಗಗನಕ್ಕೇರುತ್ತಿರುತ್ತವೆ. ಕೊರತೆಯ ಆಯವ್ಯಯ ಉದ್ಭವವಾದಾಗ ಅದನ್ನು ತೀವ್ರತರವಾಗಿ ಪರಿಗಣಿಸಬೇಕಾಗಿದೆ. ಈ ಒಂದು ಬಡ್ಜೆಟ್ ಹಣದುಬ್ಬರಕ್ಕೆ ಎಡೆ ಮಾಡಿಕೊಡತಕ್ಕ ಭಾರೀ ಕೊರತೆಯನ್ನು ಎದುರಿಸತಕ್ಕ ಆಡಳಿತ ನಿರ್ಮಾಣಕ್ಕೆ ಎಡೆ ಮಾಡಿಕೊಡತಕ್ಕಂಥಾ